**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3553/2021**

| | | | |
|---|---|---|---|
| **ಹೆಸರು** | **:** | **ಜಟ್ಟೆಪ್ಪ** | **ದೋ.ಸಾ. 1** |
| **ತಂದೆಯ ಹೆಸರು** | **:** | **ಭೀಮಣ್ಣ** | **ಪ್ರಾ.ಸಾ. 1** |
| **ವಯಸ್ಸು** | **:** | **36 ವರ್ಷ** | **ದಿನಾಂಕಃ 09-01-2024** |
| **ಉದ್ಯೋಗ** | **:** | **ಅಬಕಾರಿ ನೀರಿಕ್ಷಕರು** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 10-03-2021 ರಿಂದ ಇಲ್ಲಿಯವರೆಗೆ ನಾನು ಚಿಂಚೋಳಿ ವಲಯ ಅಬಕಾರಿ ನೀರಿಕ್ಷಕನಾಗಿ ಕೆಲಸ ಮಾಡಿದ್ದೇನೆ.

ದಿನಾಂಕ 09-05-2021 ರಂದು ಬೆಳಿಗ್ಗೆ 06-45 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಬಾತ್ಮಿದಾರರು ನನಗೆ ಕರೆ ಮಾಡಿ ಚಿಂಚೋಳಿ ಪಟ್ಟಣದಿಂದ ಗ್ರಾಮಾಂತರ ಪ್ರದೇಶಕ್ಕೆ ಅಕ್ರಮ ಮದ್ಯ ಸಾಗಾಟವಾಗುತ್ತಿದೆ ಎಂದು ಬಾತ್ಮಿ ಕೊಟ್ಟ ಮೇರೆಗೆ ನಾನು, ನಮ್ಮ ಸಿಬ್ಬಂದಿ ಚಾಸಾ-7 ಮತ್ತು 8 ರವರನ್ನು ಕರೆದುಕೊಂಡು ಚಂದಾಪೂರ ಕ್ರಾಸ್ ಹತ್ತಿರ ಇರುವ ಚಹಾ ಅಂಗಡಿ ಬಳಿ ಬಂದು ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಚಾರವನ್ನು ತಿಳಿಸಿರುತ್ತೇನೆ. ನಮ್ಮ ಜೊತೆ ದಾಳಿ ಸಂದರ್ಭದಲ್ಲಿ ಹಾಜರಿರಲೂ ಸದರಿ ಪಂಚರು ಒಪ್ಪಿದ್ದರಿಂದ ಅವರನ್ನು ನಮ್ಮ ಜೊತೆ ಕರೆದುಕೊಂಡು ಚಿಂಚೋಳಿಯ ಬಸವೇಶ್ವರ ವೃತ್ತದ ಬಳಿ ಇರುವ ಕಲ್ಬುರ್ಗಿ ತಾಂಡೂರು ರಸ್ತೆಯಲ್ಲಿ ವಾಹನ ತಪಾಸಣೆ ಮಾಡುತ್ತಿದ್ದೆವು.

ಬೆಳಿಗ್ಗೆ 07-00 ಗಂಟೆ ಸುಮಾರಿಗೆ ಕಲ್ಬುರ್ಗಿ ಕಡೆಗೆ ಹೊರಟಿದ್ದ ಕೆಎ-32 ಇಕೆ-3113 ರ ದ್ವಿ-ಚಕ್ರ ವಾಹನವನ್ನು ತಪಾಸಣೆ ಮಾಡುವ ಸಲುವಾಗಿ ಕೈ ಸನ್ನೆ ಮಾಡಿ ನಿಲ್ಲಿಸುವಂತೆ ಹೇಳುತ್ತಿದ್ದಂತೆ ಸದರಿ ವಾಹನದ ಚಾಲಕ ನಮ್ಮನ್ನು ನೋಡಿ ಬೈಕನ್ನು ಸ್ಥಳದಲ್ಲೆ ಬಿಟ್ಟು ಓಡಿ ಹೋಗಿರುತ್ತಾನೆ. ಸದರಿ ವ್ಯಕ್ತಿ ಬಿಟ್ಟು ಹೋಗಿದ್ದ ಬೈಕನ ಪೆಟ್ರೊಲ್ ಟ್ಯಾಂಕನ ಮೇಲೆ ಒಂದು ಪ್ಲಾಸ್ಟಿಕ ಚೀಲ ಇರುವುದು ಕಂಡು ಬಂದಿದ್ದರಿಂದ ಅನುಮಾನಗೊಂಡು ಪಂಚರ ಸಮಕ್ಷಮ ಸದರಿ ಚೀಲವನ್ನು ಪರಿಶೀಲಿಸಲು ಶೋಧನಾ

ಸಮುಚಿತ ಪತ್ರವನ್ನು ಬರೆದುಕೊಂಡೆನು. ನಂತರ ಬೈಕ್ ಮೇಲೆ ಇದ್ದ ಗೋಣಿ ಚೀಲವನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ 3 ರಟ್ಟಿನ ಬಾಕ್ಸಗಳಲ್ಲಿ 48 ರಂತೆ ತಲಾ 180 ಮಿಲಿಯಒಟ್ಟು 144 ಯು.ಎಸ್. ವಿಸ್ಕಿ ಬಾಟಲಿಗಳು ಮತ್ತು ಒಂದು ಬಾಕ್ಸನಲ್ಲಿ ತಲಾ 180 ಮಿಲಿಯ 48 ಓ.ಟಿ. ವಿಸ್ಕಿ ಟೆಟ್ರಾ ಪ್ಯಾಕೆಟುಗಳು ಇರುವುದು ಕಂಡು ಬಂತು. ಅದೇ ರೀತಿ ಸದರಿ ವಾಹನ ತಪಾಸಣೆ ವೇಳೆಗೆ ಬೈಕನಲ್ಲಿ ಒಂದು ಆಧಾರ ಕಾರ್ಡ ಪ್ರತಿ ಸಿಕ್ಕಿದ್ದು ಅದರಲ್ಲಿ ಆರೋಪಿ ಶಿವಾನಂದ ತಂದೆ ಚಂದ್ರಪ್ಪನ ವಿವರ ಮತ್ತು ವಿಳಾಸ ಇರುವುದು ಕಂಡು ಬಂತು. ಆರೋಪಿ ಸದರಿ ಮುದ್ದೆಮಾಲನ್ನು ಬಿಟ್ಟು ಓಡಿಹೋಗಿದ್ದರಿಂದ ಆತ ಅವುಗಳನ್ನು ಅಕ್ರಮವಾಗಿ ಸ್ವಾಧೀನವಾಗಿ ಇಟ್ಟುಕೊಂಡಿದ್ದಾನೆ ಎಂದು ಖಚಿತಗೊಂಡಿದ್ದರಿಂದ ಸದರಿ ಎಲ್ಲಾ ಮದ್ಯದ ಬಾಟಲಿಗಳನ್ನು ಪಂಚರ ಸಮಕ್ಷಮ ಬೆಳಿಗ್ಗೆ 07-00 ರಿಂದ 08-00 ಗಂಟೆವರೆಗೆ ಬರೆಯಲಾದ ಪಂಚನಾಮೆ ದಾಖಲೆಯಡಿ ಜಪ್ತು ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ 6 ಯು.ಎಸ್.ವಿಸ್ಕಿ ಬಾಟಲಿಗಳನ್ನು ಮತ್ತು ಎರಡು ಓ.ಟಿ.ವಿಸ್ಕಿ ಟೆಟ್ರಾ ಪ್ಯಾಕೆಟಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಅರಗಿನಿಂದ ಸೀಲ್ ಮಾಡಿರುತ್ತೇನೆ.

ಘಟನಾ ಸ್ಥಳದ ಪೂರ್ವಕ್ಕೆ ಜಬ್ಬಾರ ಪೆಟ್ರೋಲ್ ಪಂಪ್, ಪಶ್ಚಿಮಕ್ಕೆ ಕಲ್ಬುರ್ಗಿ ರಸ್ತೆ, ಉತ್ತರಕ್ಕೆ ಚಿಂಚೋಳಿ ರಸ್ತೆ ಮತ್ತು ದಕ್ಷಿಣಕ್ಕೆ ತಾಂಡೂರು ರಸ್ತೆ ಇರುತ್ತದೆ.

ನಂತರ ವಶಕ್ಕೆ ಪಡೆದ ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಸಿಬ್ಬಂದಿ ಸಮೇತ ಬೆಳಿಗ್ಗೆ 08-10 ಗಂಟೆ ಸುಮಾರಿಗೆ ಕಚೇರಿಗೆ ವಾಪಸ್ಸಾಗಿ ಆರೋಪಿ ವಿರುದ್ಧ ಸ್ವ-ಪಿರ್ಯಾದಿಯನ್ನು ತಯಾರಿಸಿ ಅದರ ಆಧಾರದ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯ ಪ್ರತಿಗಳನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ.

ಸದರಿ ಸ್ವ-ಪಿರ್ಯಾದನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-1 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಿಪಿ-1 ರ ದಾಖಲೆಯ ಆಧಾರದ ಮೇಲೆ ನಾನು ದಾಖಲಿಸಿದ ಪ.ವ.ವರದಿಯನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-2 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-3 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಘಟನಾ ಸ್ಥಳದಲ್ಲಿ ಜರುಗಿಸಿದ ಶೋಧನಾ ಸಮೂಚಿತ ಪತ್ರವನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-4 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ಪಡೆಯಲಾದ ಮಾದರಿ ಸೀಲು ಪತ್ರವನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-5 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ನಾನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿದ್ದ 6 ಯು.ಎಸ್.ವಿಸ್ಕಿ ಬಾಟಲಿಗಳನ್ನು ಮತ್ತು ಎರಡು ಓ.ಟಿ.ವಿಸ್ಕಿ ಟೆಟ್ರಾ ಪ್ಯಾಕೆಟಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ 6 ಖಾಲಿ ಬಾಟಲಿಗಳನ್ನು ಈಗ ಮು.ಮಾ. 1 ರಿಂದ 6 ಎಂದು ಮತ್ತು ಎರಡು ಟೆಟ್ರಾ ಪ್ಯಾಕಗಳನ್ನು ಮು.ಮಾ.7 ಮತ್ತು 8 ಎಂದು ಗುರುತಿಸಲಾಯಿತು.

ದಾಳಿ ಕಾಲಕ್ಕೆ ಓಡಿ ಹೋದ ಆರೋಪಿ ಶಿವಾನಂದ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು ಆತನನ್ನು ಮತ್ತೇ ನೋಡಿ ಗುರುತಿಸುತ್ತೇನೆ.

ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲವಕಾಶ ಕೋರುತ್ತಾರೆ. ಸೂಕ್ತ ಕಾರಣ ನೀಡಿರುವುದಿಲ್ಲ ಆದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**